ಸರಿದೂಗಿಸಲಾರದವುಗಳನ್ನು ನಮಗೇ ಇಷ್ಟವಿಲ್ಲವೆಂದು ಹೇಳಲು ಹಿಂಜರಿಯುತ್ತೇವೆ. ಆಗ ನಾವು ನಮ್ಮ ತಂದೆ ತಾಯಿಗಳ ಮೇಲೆ ಅದರಲ್ಲಿಯೂ ಅಮ್ಮಂದಿರ ಮೇಲೆ ಹಾಕುವುದು ಹೊಸದೇನೂ ಅಲ್ಲ. ನಿನ್ನ ದೃಷ್ಟಿಯಲ್ಲಿ ನಾನೀಗ ಸ್ನೇಹಿತಳಷ್ಟೆ. ಅದೇ ತಾನೆ ನೀನು ಹೇಳಬಯಸುವುದು. ಆದರೆ, ಮದುವೆ ಮಂಟಪಕ್ಕೆ ಹೋಗುವ ಮುನ್ನ ಸಿನಿಮಾಗಳಲ್ಲಿ ಮದುಮಗಳು ಮನೆಯಿಂದ ಓಡಿಹೋದಂತೆ ಇವತ್ತೇ ಈ ಮಾತೇಕೆ ಹೇಳುತ್ತಿರುವೆ... ನಿನ್ನ ಪ್ರತಿಷ್ಠೆಗೆ ಭಂಗವೆಂದೇ? ಮಾಧ್ಯಮಗಳು ಛೀಮಾರಿ ಹಾಕಬಹುದೆಂದು ಹೆದರಿಕೆಯೇ... ನನ್ನ ಜೀವನದಲ್ಲಿ ಇಷ್ಟೆಲ್ಲಾ ನಡೆದಾದ ಮೇಲೆ ನಿನಗೆ ತಿಳಿಸದೆ ನಾನಾಗಲಿ, ನನ್ನ ಮನೆಯವರಾಗಲಿ ಮಾಧ್ಯಮಗಳು ಕೇಳಿದಾಕ್ಷಣ ಪ್ರೀತಿ ಮದುವೆಗಳೆಂಬ ವಿಷಯ ಹೇಗೆ ಹೇಳಲು ಸಾಧ್ಯ. ಅಂದು ಅತ್ಯಾಚಾರ ಘಟನೆ ನಡೆದಾಗ ಅಪ್ಪ ನಿನ್ನನ್ನು ಗೆಳೆಯನೆಂದು ಹೇಳಿದರೇ ಹೊರತು ಮದುವೆ ನಿಶ್ಚಯವಾಗಿದೆಯೆಂದು ಹೇಳಲಿಲ್ಲ. ನಿಜ ಹೇಳಬೇಕೆಂದರೆ ನಾವಿಬ್ಬರೂ ಒಬ್ಬರನ್ನೊಬ್ಬರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಮುದ್ದಿನ ಕಚಗುಳಿ ಹೇಗಿರುತ್ತದೆಯೋ ಎಂದು ಪಿಸುಗುಡಬೇಕಾದ ವಯಸ್ಸಿನಲ್ಲಿರುವ ನಾವು ಗಾಯಗಳ ನಿಬ್ಬೆರಗನ್ನು ಹಂಚಿಕೊಳ್ಳುತ್ತಿದ್ದೇವೆ. ಐ ಅಂಡರ್‌ಸ್ಟ್ಯಾಂಡ್ ಚೇತು" ನಿಧಾನವಾಗಿ ಅವನ ಕಣ್ಣುಗಳ ಒಳಗೆ ನೋಡುತ್ತಾ ಹೇಳಿದೆ.

ವಿಚಿತ್ರವೆಂಬಂತೆ ಅವನ ಕಣ್ಣಲ್ಲಿ ನೋವಿರಲಿಲ್ಲ. ಒಂದು ನಿಶ್ಚಿಂತೆ ಕಾಣಿಸಿತು. ಅಂದರೆ... ಅವನಿಗೆ ನಾನು ಭಾರವಾಗಿದ್ದೇನೆ. ಎಲ್ಲವೂ ಕ್ಷಣಾರ್ಧದಲ್ಲಿ ಅರ್ಥವಾಯಿತು. ಗೂಳಿಗಳನ್ನು ಹಿಮ್ಮೆಟ್ಟಿಸಬಲ್ಲೆ ಎಂದ ಮನುಷ್ಯ ಏನೂ ಮಾಡಲಾಗದ ನಿಸ್ಸಹಾಯಕ ಸ್ಥಿತಿಯಲ್ಲಿ ಅಂದು ಉಳಿಯಬೇಕಾಗಿ ಬಂದದ್ದು ಅವನನ್ನು ಎಷ್ಟು ಗಾಯಗೊಳಿಸಿದೆಯೋ... ಅದರಿಂದ ಹೊರಬರಲು ಅವನಿಗೆ ಸಹಾಯಕ್ಕೆ ನಿಂತವರಾರು... ಇಬ್ಬರು ತೀವ್ರವಾಗಿ ಗಾಯಗೊಂಡ ವ್ಯಕ್ತಿಗಳು ಒಬ್ಬರನ್ನೊಬ್ಬರು ಆಸರೆಯಾಗಿ ನಿಲ್ಲಬೇಕೆಂದು ಬಯಸಿದ್ದು ತಪ್ಪೆನಿಸುತ್ತಿದೆ.

"ಓಕೆ, ಚೇತು. ನೋ ಬಿಟ್ಟರ್‌ನೆಸ್" ಎಂದೆ.

ಅವನು ನನ್ನ ಕೋಣೆಯಿಂದ ಹೊರನಡೆದ.

ಆಗ ಅತ್ತೆ. ತುಂಬಾ ದಿನಗಳ ನಂತರ. ಕಣ್ಣೀರು ಧಾರೆಗಟ್ಟಿದವು.

ನನ್ನ ಪ್ರೀತಿಯ ಬಳ್ಳಿಯನ್ನು ಬೇರು ಸಹಿತ ಕಿತ್ತೊಗೆದ ಇವರಿಗೆ ಯಾವ ಶಿಕ್ಷೆ ವಿಧಿಸಿದರೆ ತಾನೆ ನನ್ನ ಪ್ರೀತಿ ಮತ್ತೆ ಬೇರು ಬಿಟ್ಟುಕೊಂಡೀತು?

ನಾನು ಮಾಡಿದ್ದಾದರೂ ಏನು? ನನ್ನ ತಪ್ಪೇನು? ಈ ಶಾರೀರಿಕ ಅತ್ಯಾಚಾರದ ನಂತರ ನನ್ನ ಜೀವನದಲ್ಲಿ ಎಲ್ಲವೂ ಬದಲಾಗಿದೆ. ಇದೇನಿದು. ಆ ಭಾಗವೂ ಶರೀರವೇ ತಾನೆ. ಶರೀರದ ಯಾವ ಭಾಗವಾದರೂ ಒಂದು ಅಪಘಾತಕ್ಕೆ ಒಳಗಾದರೆ ಸುತ್ತಲಿನ ಸಮಾಜ ಈ ಪರಿಯಲ್ಲಿ ಸ್ಪೆಷಲ್ ಕೆಟಗರಿ ಮನುಷ್ಯರಂತೆ ಕಾಣದು. ಈ ಒಂದು ಅಪಘಾತದಲ್ಲಿ ಮಾತ್ರವೇ ಹೀಗೆ ನೋಡುತ್ತಾರೆಂದು ನನಗರ್ಥವಾಯಿತು. ಸುತ್ತಲಿದ್ದವರಲ್ಲಿ ತಲೆ ಕೆಳಗು ಮಾಡುವ ವರ್ತನೆ... ಇದು ನನಗೊದಗಿದ ಅನುಭವ. ಎಲ್ಲ ಲೆಕ್ಕಾಚಾರ... ಎಲ್ಲವೂ ಅಷ್ಟೆ.

ಕೋಣೆಯಿಂದ ಹೊರಬಂದೆ.

"ಇದು ಹೇಗೆ ಹೀಗೆ ನಡೆದುಕೊಳ್ಳಲು ಸಾಧ್ಯ? ಇದೇ ಮದುವೆಯಾದ ಮೇಲೆ ನಡೆದಿದ್ದರೆ ಬಿಟ್ಟು ಬಿಡುತ್ತಾರಾ? ಇದೆಲ್ಲಾ ಆದಾಗ್ಯೂ ಚೈತನ್ಯನೊಂದಿಗೆ ಮದುವೆಯಾಗಬಹುದೆಂದು ಸ್ವಲ್ಪ ಧೈರ್ಯದಿಂದಿದ್ದೆ. ಜೀವನ ಸಂಗಾತಿಯ ಕೊರತೆಯಿಲ್ಲವೆಂದುಕೊಂಡೆ. ಇದೇನಿದು ಹೀಗಾಯಿತು" ದುಃಖ, ನೋವು, ಯಾತನೆ ಕೂಡಿದ ಧ್ವನಿಯಲ್ಲಿ ಅಮ್ಮ ಕೆರಳಿದ್ದಳು.